ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 ದಿನಾಂಕ : 19–10–2020

# ಪತ್ರಿಕಾ ಪ್ರಕಟಣೆ

## ಸೈನಿಕ ಶಾಲೆಗಳ ಪ್ರವೇಶ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

ಬೆಂಗಳೂರು, ಅಕ್ಟೋಬರ್ 19 (ಕರ್ನಾಟಕ ವಾರ್ತೆ): ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿಯವರು ಭಾರತ ಸರ್ಕಾರದ ಶಿಕ್ಷಣ ಮಂತ್ರಾಲಯದ ಸಹಯೋಗದಲ್ಲಿ ¨2021–22ರ ಶೈಕ್ಷಣಿಕ ವರ್ಷಕ್ಕಾಗಿ 6ನೇ ತರಗತಿ ಮತ್ತು 9ನೇ ತರಗತಿಗಳ ಪ್ರವೇಶಕ್ಕಾಗಿ ದೇಶದಾದ್ಯಂತ 33 ಸೈನಿಕ ಶಾಲೆಗಳಲ್ಲಿ ಸೈನಿಕ ಪ್ರವೇಶ ಪರೀಕ್ಷೆಯನ್ನು 10ನೇ ಜನವರಿ 2021 ರಂದು ನಡೆಸಲಾಗುವುದು.

ಆರನೇ ತರಗತಿಗೆ ಪ್ರವೇಶ ಪಡೆಯುವ ಅಭ್ಯರ್ಥಿಗಳು ಮಾರ್ಚ್ 31, 2021ಕ್ಕೆ 10 ರಿಂದ 12 ವರ್ಷದ ನಡುವೆ ಇರಬೇಕು. ಬಾಲಕ ಮತ್ತು ಬಾಲಕಿಯರಿಗೆ ಎಲ್ಲಾ ಸೈನಿಕ ಶಾಲೆಗಳಲ್ಲಿ ಪ್ರವೇಶ ತೆರೆದಿರುತ್ತದೆ. ಒಂಭತ್ತನೇ ತರಗತಿ ಅಭ್ಯರ್ಥಿಗಳು ಮಾರ್ಚ್ 31, 2021ಕ್ಕೆ 13ರಿಂದ 15 ವರ್ಷದ ನಡುವೆ ಇರಬೇಕು ಹಾಗೂ ಪ್ರವೇಶ ಸಮಯದಲ್ಲಿ ಒಂದು ಮಾನ್ಯತೆ ಹೊಂದಿರುವ ಶಾಲೆಯಿಂದ 8ನೇ ತರಗತಿಗೆ ತೇರ್ಗಡೆ ಹೊಂದಿರಬೇಕು.

ಪರೀಕ್ಷಾ ಶುಲ್ಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ರೂ.400/–ಗಳು ಹಾಗೂ ಇತರರಿಗೆ ರೂ.550/– ಗಳು. ಪರೀಕ್ಷಾ ದಿನಾಂಕ, ಪಠ್ಯಕ್ರಮ, ಸೈನಿಕ ಶಾಲೆಗಳ ಪಟ್ಟಿ, ತಾತ್ಕಾಲಿಕ ಪ್ರವೇಶ, ಸೀಟುಗಳ ಮೀಸಲು ಹಾಗೂ ಇತರೆ ಮಾಹಿತಿಗಾಗಿ ವೆಬ್‌ಸೈಟ್ www.nta.ac.in ನಲ್ಲಿ ಮಾಹಿತಿ ಕೈಪಿಡಿ ಲಭ್ಯವಿರುತ್ತದೆ.

ಭಾರತದಾದ್ಯಂತ ಸೈನಿಕ ಶಾಲೆಗಳ ಪ್ರವೇಶ ಪರೀಕ್ಷೆ (ಎಐಎಸ್‌ಎಸ್‌ಇಇ) ಪ್ರವೇಶ ಪಡೆಯಲು ಇಚ್ಚಿಸುವ ಅಭ್ಯರ್ಥಿಗಳು ವಿವರವಾದ ಮಾಹಿತಿ ಕೈಪಿಡಿಯನ್ನು ಓದಿಕೊಂಡು ಆನ್‌ಲೈನ್ ಮೂಲಕ ವೆಬ್‌ಸೈಟ್ https://aissee.nta.nic.in ನಲ್ಲಿ ಅಕ್ಟೋಬರ್ 2020ರ ಅಕ್ಟೋಬರ್ 20 ರಿಂದ ನವೆಂಬರ್ 19 ರೊಳಗೆ ಅರ್ಜಿ ಸಲ್ಲಿಸಬೇಕು.

ಪರೀಕ್ಷಾ ಶುಲ್ಕವನ್ನು ಸಹ ಆನ್‌ಲೈನ್ ಮೂಲಕ ಪೇಮೆಂಟ್ ಗೇಟ್‌ವೇಗಳಾದ ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್ ಅಥವಾ ಇಂಟರ್‌ನೆಟ್ ಬ್ಯಾಂಕಿಂಗ್ ಅಥವಾ ಪೇಟಿಎಂ ವ್ಯಾಲೆಟ್ ಮೂಲಕ ಪಾವತಿಸಹುದು.

ಹೆಚ್ಚಿನ ವಿವರಗಳಿಗಾಗಿ ಬ್ಲಾಕ್ ಸಿ20, 1ಎ/8, ಐಐಟಿಕೆ ಔಟ್ ರೀಚ್ ಸೆಂಟರ್, ಸೆಕ್ಟರ್ 62, ನೋಯ್ಡಾ, ಗೌತಮ್ಬುದ್ಧ ನಗರ್ ಜಿಲ್ಲೆ, ಉತ್ತರಪ್ರದೇಶ–201309 ನ್ನು ಸಂಪರ್ಕಿಸಬಹುದು, ಅಲ್ಲಿದೆ ಮೇಲಿನ ಲಿಂಕ್‌ಗಳನ್ನು ಶಾಲಾ ವೆಬ್‌ಸೈಟ್ www.sainikschoolkodagu.edu.in ನಲ್ಲಿ ಸಹ ಪಡೆಯಬಹುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಅ.21 ರಂದು ಪೊಲೀಸ್ ಸಂಸ್ಮರಣ ದಿನಾಚರಣೆ

ಬೆಂಗಳೂರು, ಅಕ್ಟೋಬರ್ 19 (ಕರ್ನಾಟಕ ವಾರ್ತೆ): ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಕರ್ನಾಟಕ ರಾಜ್ಯ ಹಾಗೂ ರಾಜ್ಯದ ಸಮಸ್ತ ಪೊಲೀಸ್ ಅಧಿಕಾರಿಗಳ ಸಂಯುಕ್ತಾಶ್ರಯದಲ್ಲಿ ಅಕ್ಟೋಬರ್ 21 ರಂದು ಬೆಳಿಗ್ಗೆ 8.00 ಗಂಟೆಗೆ ಮೈಸೂರು ರಸ್ತೆಯಲ್ಲಿರುವ ನಗರ ಸಶಸ್ತ್ರ ಮೀಸಲು ಪಡೆ ಕೇಂದ್ರ ಸ್ಥಾನದ ಹುತಾತ್ಮರ ಉದ್ಯಾನವನದಲ್ಲಿ ಪೊಲೀಸ್ ಸಂಸ್ಮರಣ ದಿನಾಚರಣೆಯನ್ನು ಆಚರಿಸಲಾಗುವುದು.

ಸಮಾರಂಭದ ಮುಖ್ಯ ಅತಿಥಿಗಳಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಆಗಮಿಸುವರು. ಅಧ್ಯಕ್ಷತೆಯನ್ನು ಗೃಹ ಸಚಿವರಾದ ಬಸವರಾಜ ಬೊಮ್ಮಾಯಿ ವಹಿಸುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ದತ್ತು ಸ್ವೀಕಾರ

ಬೆಂಗಳೂರು, ಅಕ್ಟೋಬರ್ 19 (ಕರ್ನಾಟಕ ವಾರ್ತೆ): ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು ಇಲ್ಲಿ ಪ್ರಾಣಿಗಳ ದತ್ತು ಸ್ವೀಕಾರ ಯೋಜನೆ ಅಡಿಯಲ್ಲಿ ಕಿರಣ್‌ಕುಮಾರ್ ಪಿ. ಬೆಂಗಳೂರು ಇವರು ರಸ್ಸಲ್ ಮೈಪರ್ , ಎ.ಜಿ. ಪಾರ್ಥ ಸಾರತಿ ಮೈಸೂರು ಇವರು ಲವ್‌ಬರ್ಡ್, ಟಿ. ವೆಂಕಟೇಶ್, ಬೆಂಗಳೂರು ಇವರು ರೇನ್‌ಬೋ ಲೋರಿಕೀಟ್‌ನ್ನು ದತ್ತು ಸ್ವೀಕರಿಸಿರುತ್ತಾರೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## All INDIA SAINK SCHOOLS ENTRANCE EXAMINATION

Bangalore, October 19 (Karnataka Information) : National Testing Agency established by Ministry of Education (GOI) will be conducting the AISSEE-2021 for admission to Class VI and Class IX in 33 Sainik Schools across the country, for the academic year 2021-22. Sainik Schools are English medium residential schools affiliated to CBSE and managed by Sainik Schools Society, Ministry of Defence. They prepare cadets to join the National Defence Academy. Indian Naval Academy and other training academies for Officers.

Date of Exam 10th January 2021. Mode of exam is Pen paper (OMR Sheets based). Paper pattern Multiple Choice Questions. Exam cities are as mentioned in the information Bulletin. Eligibility for admission to Class VI Candidate should be between 10 and 12 years as on 31.03.2021. Admission for Girls for open in Class VI only in all Sainik Schools.

Eligibility for admission to Class IX : Candidate should be between 13 and 15 years as on 31.3.2021 and should have passed Class VIII, from a recognized School at the time of admission. Application can be submitted between 20-10-2020 and 19-11-2020 online only. Further information can be had from www.nta.in, https://aissee.nta.nic.in or www.sainikschoolkodagu.edu.in. Further contact details: Block C-20, IA/8, II TK Outreach Centre, Sector 62, Noida, Gautam Buddh Nagar District, Uttar Pradesh 201 309 says official press release.